<u>ದಿನಾಂಕ 19.08.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎಂ ಜೆ ಜೈನ್ ವಕೀಲರಿಂದ ಎದುರುದಾರ 1 ರಿಂದ 5 ಪರವಾಗಿ ಃ</u>

18. ನಾನು ಎಸ್ ಎಸ್ ಎಲ್ ಸಿ ವರೆಗೆ ಅಭ್ಯಾಸ ಮಾಡಿದ್ದೇನೆ. ನಮ್ಮ ತಂದೆ ಎದುರುದಾರ 10 ಪಶುಪತಿ ಇವರು ಬಿ ಕಾಂ ಪದವಿ ಓದಿದ್ದರು ಎನ್ನುವುದು ನಿಜ. ಎದುರುದಾರ 10 ಪಶುಪತಿ ಇವರು ಉಮ್ಮಡಹಳ್ಳಿ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದ ಸಕ್ರೇಟರಿ ಆಗಿದ್ದರು ಎನ್ನುವುದು ನಿಜ. ನಮ್ಮ ತಂದೆ ಪಶುಪತಿ ಇವರು 1962-63 ರಲ್ಲಿ ನೌಕರಿಯಲ್ಲಿ ಇದ್ದರು ಅನ್ನುವುದು ನನಗೆ ಗೊತ್ತಿಲ್ಲ. ಎದುರುದಾರ 10 ಪಶುಪತಿ ಇವರು 2000 ಇಸವಿಯಲ್ಲಿ ನಿವೃತ್ತಿ ಹೊಂದಿದ್ದಾರೆ. ಎದುರುದಾರ 10 ಇವರಿಗೆ 1962-63 ರಲ್ಲಿ 22 ವರ್ಷ ವಯಸ್ಸಾಗಿತ್ತು. ಏಕೆಂದರೆ ಅವರು 1941 ರಲ್ಲಿ ಜನ್ಮ ತಾಳಿದ್ದಾರೆ. ಎದುರುದಾರ 10 ಪಶುಪತಿ ಇವರು ನಮ್ಮ ಊರಿಗೆ ಯಜಮಾನರಾಗಿದ್ದರು ಎನ್ನುವುದು ನಿಜ. ನಮ್ಮ ತಾತ ಎ ಚೌಡೇಗೌಡ ಇವರ ಕುಟುಂಬಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ತಂದೆ ಪಶುಪತಿ ಬಿ ಕಾಂ ಪದವಿ ಓದಿದ್ದನ್ನು ಬಿಟ್ಟರೆ ಬೇರೆ ಮಕ್ಕಳು ಅಷ್ಟು ಓದಿಲ್ಲ ಅನ್ನುವ ವಿಚಾರ ನನಗೆ ಗೊತ್ತಿಲ್ಲ.

19. ನಮ್ಮ ತಾತಾ ಎ ಚೌಡೇಗೌಡ ಇವರ ತಂದೆ ಹೆಸರು ದೊಡ್ಡಚೌಡೇಗೌಡ ಎನ್ನುವುದು ನಿಜ. ನಮ್ಮ ತಾತ ಎ ಚೌಡೇಗೌಡ ಇವರಿಗೆ ಒಟ್ಟು 6 ಜನ ಮಕ್ಕಳು. ಅವರ ಹೆಸರು 1. ತಮ್ಮಯ್ಯ, 2.ಚನ್ನಯ್ಯ. 3. ಕೆಂಪಯ್ಯ, 4. ಪುಟ್ಟಸ್ವಾಮಯ್ಯ, 5. ಶಿವರವಮಯ್ಯ, 6. ತಾಯಮ್ಮ ಎನ್ನುವುದು ನಿಜ. ಮೊದಲನೇ ಮಗ ತಮ್ಮಯ್ಯ ಎನ್ನುವವರಿಗೆ ಜಾನಕಮ್ಮ ಮತ್ತು ಕೆಂಪಮ್ಮ ಎನ್ನುವ 2 ಹೆಂಡತಿಯರು ಎನ್ನುವುದು ನಿಜ. ಜಾನಕಮ್ಮ ಎನ್ನುವವರ ಮುಖಾಂತರ ಒಬ್ಬನೇ ಮಗ ಅವನೇ ಎದುರುದಾರ ಎದುರುದಾರ 10 ಪಶುಪತಿ ಎನ್ನುವುದು ನಿಜ. ಕೆಂಪಮ್ಮ ಅನ್ನುವವರ ಮುಖಾಂತರ ತಮ್ಮಯ್ಯನಿಗೆ 2 ಜನ ಹೆಣ್ಣು ಮಕ್ಕಳು ಅವರ ಹೆಸರು 1 ರತ್ನಮ್ಮ 2 ಪುಟ್ಟತಾಯಮ್ಮ ಎನ್ನುವುದು ನಿಜ. ರತ್ನಮ್ಮ ಮೃತಪಟ್ಟಿದ್ದಾಳೆ ಪುಟ್ಟತಾಯಮ್ಮ ಈ ಕೇಸಿನಲ್ಲಿ ಎದುರುದಾರ 5 ಆಗಿದ್ದಾಳೆ ಎನ್ನುವುದು ನಿಜ. ರತ್ನಮ್ಮ ಕೋಂ ಶಿವಲಿಂಗಯ್ಯ ಇವರಿಗೆ 3 ಜನ ಮಕ್ಕಳು ಅವರ ಹೆಸರು 1 ಸುಮಿತ್ರ 2 ಚಂದ್ರಶೇಖರ 3 ಸವಿತ ಎನ್ನುವುದು ನಿಜ. ಅವರೇ ಎದುರುದಾರ 2 ರಿಂದ 4 ಆಗಿರುತ್ತಾರೆ ಎನ್ನುವುದು ನಿಜ.

20 ತಮ್ಮಯ್ಯ, ರತ್ನಮ್ಮ ಮತ್ತು ಎದುರುದಾರ 5 ಪುಟ್ಟತಾಯಮ್ಮ ಇವರ ನಡುವೆ ಯಾವತ್ತೂ ಭಾಗ ಆಗಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ತಮ್ಮಯ್ಯ, ರತ್ನಮ್ಮ ಹಾಗೂ ಎದುರುದಾರ 5 ಪುಟ್ಟತಾಯಮ್ಮ ಇವರ ನಡುವೆ ಭಾಗ ಆಗಿದೆ ಎಂದು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ. ಎದುರುದಾರ 1 ರಿಂದ 5 ಇವರು ಒಟ್ಟು ಕುಟುಂಬದ ಆಸ್ತಿಯಲ್ಲಿ ಭಾಗ ಕೇಳಿ ಓ ಎಸ್ 46/2010 ಕೇಸನ್ನು 1 ನೇ ಅಪರ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗ ಮಂಡ್ಯ ಇವರಲ್ಲಿ ಭಾಗ ಕೇಳಿ ದಾಖಲು ಮಾಡಿ ದ್ದಾರೆ ಎನ್ನುವುದು ನಿಜ. ಓ ಎಸ್ 46/2010 ರಲ್ಲಿ ಎದುರುದಾರ 10 ಪಶುಪತಿ ಇವರು ಮೃತಪಟ್ಟ ನಂತರ ನಮ್ಮನ್ನು ಪ್ರತಿವಾದಿ ಅಂತ ಪಾರ್ಟಿ ಮಾಡಿದ್ದಾರೆ ಎನ್ನುವುದು ನಿಜ. ಈಗ ತೋರಿಸಿದ ಓ ಎಸ್ 46/2010 ರಲ್ಲಿಯ ಆರ್ಡರ್ ಶೀಟ್ ನೋಡುತ್ತಿದ್ದೇನೆ ಅದೇ ಆಗಿರುತ್ತದೆ ಅದನ್ನು ನಿಡಿ.33 ಎಂದು ಗುರ್ತಿಸಲಾಯಿತು. ಅದೇ ರೀತಿ ಓ ಎಸ್ 46/2010 ರಲ್ಲಿಯ ಪ್ಲೆಂಟ್ ಕಾಪಿಯನ್ನು ನಿಡಿ 34 ಎಂದು ಗುರ್ತಿಸಲಾಯಿತು. ಈಗ ತೋರಿಸಿದ ಆರ್ ಎಫ್ ಎ 2173/2018 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದವರು ಮಾಡಿದ್ದ ಆದೇಶ ಕಾಪಿ ನೋಡುತ್ತಿದ್ದೇನೆ. ಅದರಲ್ಲಿ ನಾವು ಪಾರ್ಟಿಯಾಗಿದ್ದೇನೆ ಎನ್ನುವುದು ನಿಜ. ಅದನ್ನು ನಿಡಿ 35 ಎಂದು ಗುರ್ತಿಸಲಾಯಿತು.

21. ನಿಡಿ 1 ಕ್ರಯ ಪತ್ರವನ್ನು ಎದುರುದಾರ 42 ಎಂ ಬಿ ವೆಂಕಟೇಶ ಇವರಿಗೆ ಬರೆದುಕೊಡಲಾಗಿದೆ. ಆ ಕ್ರಯ ಪತ್ರದ ಬರವಣಿಗೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಡಿ 1

ಕ್ರಯ ಪತ್ರದಲ್ಲಿ ಬರೆದ ಎ ಚೌಡೇಗೌಡರ ಮಗ ಸಿ ಪುಟ್ಟಸ್ವಾಮಿಗೌಡ ಎಂದರೆ ನಮ್ಮ ತಂದೆಗೆ ಚಿಕ್ಕಪ್ಪ ಆಗಬೇಕು. ಪುಟ್ಟಸ್ವಾಮಿಗೌಡ ಇವರಿಗೆ ಶೋಭ ಎನ್ನುವ ಮಗಳು ಇದ್ದಾಳೆ ಎನ್ನುವುದು ನಿಜ. ಶೋಭ ಬಿನ್ ಲೇಟ್ ಪುಟ್ಟಸ್ವಾಮಿಗೌಡ ಇವರು ಈ ಕೇಸಿನಲ್ಲಿ ಐ ಎ ನಂ. 10 ದಾಖಲು ಮಾಡಿ ನಮ್ಮನ್ನು ಸೇರ್ಪಡೆ ಮಾಡಿ ಅಂತ ಅರ್ಜಿ ಕೊಟ್ಟಿದ್ದಾರೆ ಎನ್ನುವುದು ನಿಜ. ಪಿ. ಶೋಭ ಇವರಿಗೆ ಸಂಬಂಧಪಟ್ಟ ಆಸ್ತಿಗೂ ನಮಗೂ ಸಂಬಂಧ ಇರುವುದಿಲ್ಲ. ಪುಟ್ಟಸ್ವಾಮಿಗೌಡ ಇವರಿಗೆ 5 ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಇದ್ದಾರೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾನೆ 3 ಜನ ಗಂಡು ಮಕ್ಕಳ ಹೆಸರು ನನಗೆ ಗೊತ್ತು. ಅವರ ಹೆಸರು 1 ಚಂ್ರದು 2 ಮೋಹನ, 3 ಬಾಬು. ಸದರಿ ಪುಟ್ಟಸ್ವಾಮಿಗೌಡ ಇವರಿಗೆ ನಾಗರಾಜು ಮತ್ತು ಕುಮಾರ ಎನ್ನುವ ಮಕ್ಕಳು ಇದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ನಿಡಿ 1 ಕ್ರಯ ಪತ್ರ ದ 3 ನೇ ಪುಟ ನೋಡುತ್ತಿದ್ದೇನೆ ಅದರಲ್ಲಿ ಪುಟ್ಟಸ್ವಾಮಿಗೌಡರ ಮಕ್ಕಳಾದ 1 ಕುಮಾರ 2 ಮೋಹನ 3 ಬಾಬು ಅಂತ ಉಲ್ಲೇಖ ಇದೆ ಎನ್ನುವುದು ನಿಜ. ನಿಡಿ 1 ಕ್ರಯ ಪತ್ರವನ್ನು ಎದುರುದಾರ 10 ಪಶುಪತಿ, ಅವರ ಚಿಕ್ಕಪ್ಪ ಪುಟ್ಟಸ್ವಾಮಯ್ಯ, ಅವರ ಮಕ್ಕಳು ಸೇರಿ ಎಂ ಬಿ ವೆಂಕಟೇಶ ಇವರಿಗೆ ಬರೆದುಕೊಟ್ಟಿದ್ದಾರೆ ಎನ್ನುವುದು ನಿಜ. ನಿಡಿ 1 ಕ್ರಯ ಪತ್ರದ ಪುಟ 15 ರಲ್ಲಿ ಸಿ ಪುಟ್ಟಸ್ವಾಮಿಗೌಡರಿಗೆ, ಚಂದ್ರ, ರಾಜಶೇಖರ, ನಾಗರಾಜು ಮಕ್ಕಳು ಇದ್ದಾರೆ ಅಂತ ಉಲ್ಲೇಖ ಇದೆ ಎನ್ನುವುದು ನಿಜ.

ಈ ಹಂತದಲ್ಲಿ ನ್ಯಾಯಾಲಯದ ಸಮಯವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.